ನಿಂತು ಜೊತೆಗೆ ಕರೆದುಕೊಂಡು ಹೋಗುತ್ತಿದ್ದಳು. ಅವತ್ತೂ ಹಾಗೇ. ಎಷ್ಟು ಹೊತ್ತು ಹೊರಗೆ ನಿಂತು ಕಾದರೂ ಮಾವನ ಸುದ್ದಿ ಇಲ್ಲ. ಗಂಡಸರ ಶೌಚಾಲಯದ ಒಳಗೆ ಹೋಗುವುದು ಸಜ್ಜನಿಕೆ ಅಲ್ಲ. 'ಮಾವ.., ಮಾವಾ...' ಎಂದು ಕರೆದರೆ ಉತ್ತರ ಇಲ್ಲ. ಹಿಂದೊಮ್ಮೆ ಹೀಗೇ ಕಾದು ಕಾದು, ಮಾವನ ಪ್ಯಾಂಟಿನ ಜಿಪ್ಪು ಕಿತ್ತು ಹೋಗಿತ್ತೆಂಬುದರ ಸತ್ಯ ಗೊತ್ತಾಗಿ, ಅದನ್ನು ಸ್ವಸ್ಥಾನಕ್ಕೇರಿಸಲು ಮಾವ ಶತಪ್ರಯತ್ನಪಡುತ್ತಾ ಕಾಲಹರಣ ಮಾಡಿದ್ದರೆಂಬುದು ತಿಳಿದು ಬಂದು, ಕೊನೆಗೆ ತನ್ನ ಸೇಫ್ಟಿ ಪಿನ್ನಿನಿಂದ ಸಂದರ್ಭ ನಿಭಾಯಿಸಿದ್ದು ನೆನಪಿಗೆ ಬಂತು. ಹಾಗೇನಾದರೂ ಆಗಿದ್ದರೆ ಮಾವ ಹೊರಗೆ ಬಂದು ಸುದ್ದಿ ತಿಳಿಸಬೇಕಿತ್ತು. ಮಾವನಿಗೆ ಹೊಸದಾಗಿ ಪ್ಯಾಂಟು ಹೊಲಿಸಿಕೊಟ್ಟು, ಅಥವಾ ತೆಗೆಸಿಕೊಟ್ಟು ಎಷ್ಟು ವರ್ಷಗಳಾದುವು ಎಂದು ಲೆಕ್ಕ ಹಾಕಲು ಹೋದರೆ ಹಾಗೆ ತೆಗೆಸಿಕೊಟ್ಟಿದ್ದೇ ಇಲ್ಲ ಎನ್ನುವುದು ಅವಳ ಗಮನಕ್ಕೆ ಬಂದಿದೆ.

'ವಯಸ್ಸಾದವರಿಗೆ ಹೊಸ ಬಟ್ಟೆ ಯಾಕೆ? ಇರುವುದೇ ಬೇಕಾದಷ್ಟು...' ಎನ್ನುವುದು ಹಲವರಂತೆ ಅವಳದೂ ಧೋರಣೆ. ಬಹುಶಃ ಚಿದಾನಂದ ಕೊನೆಯದಾಗಿ ಹೊಸ ಪ್ಯಾಂಟು ಹೊಲಿಸಿಕೊಂಡಿದ್ದು ಮಗನ ಮದುವೆಯ ಸಂದರ್ಭದಲ್ಲಿ. ಪ್ಯಾಂಟುಗಳು ಗಟ್ಟಿಮುಟ್ಟಾಗಿದ್ದರೂ ಜಿಪ್ಪುಗಳು ತುಕ್ಕುಗಟ್ಟಿ ಸರಿದಾಡಲು ನಿರಾಕರಿಸುತ್ತವೆ. ಇನ್ನು ಮುಂದೆ ಹೊರಗೆಲ್ಲಾದರೂ ಹೋಗಬೇಕಾದಾಗ ಈ ಕಡೆಯೂ ಗಮನ ಇಟ್ಟಿರಬೇಕು ಎಂದು ಮನಸ್ಸಲ್ಲೇ ಗುರುತು ಹಾಕಿಕೊಂಡಿದ್ದಳು ಶೀಲಾ. ಅದನ್ನು ಪಾಲಿಸುತ್ತಿದ್ದಳು ಕೂಡ. ಯಾವುದರ ಕುರಿತು ಎಚ್ಚರಿಕೆ ವಹಿಸಿದರೂ ಪ್ರತಿಸಲ ಮತ್ತೇನೋ ಒಂದು ಎಡವಟ್ಟಾಗುತ್ತದೆ. ಹೊಸ ಪಾಠ ಕಲಿಯಬೇಕಾಗುತ್ತದೆ.

ಪರಿಚಿತರೊಬ್ಬರನ್ನು ಕರೆದು ಒಳಗೆ ನೋಡಿಕೊಂಡು ಬರಲು ಹೇಳಿ ದಡಬಡಿಸುವ ಎದೆಯ ಮೇಲೆ ಕೈಯಿಟ್ಟುಕೊಂಡು ಹೊರಗೆ ಕಾದು ನಿಂತಿದ್ದಳು ಶೀಲಾ, ಆ ದಿನ. ಆ ಸಮಾರಂಭ ನಡೆದಿದ್ದು ಹಳೆಗಾಲದ ಒಂದು ಕಟ್ಟಡದಲ್ಲಿ. ಆಧುನಿಕ ವ್ಯವಸ್ಥೆಗಳಿಲ್ಲದ ಅಲ್ಲಿನ ಟಾಯ್ಲೆಟ್ಟುಗಳು ಕುಕ್ಕರುಗಾಲಲ್ಲಿ ಕೂರಬೇಕಾದಂಥವು ಎಂದು ಶೀಲಾ ಗಮನಿಸಿರಲಿಲ್ಲ. ಒಳಹೊಕ್ಕ ಚಿದಾನಂದ ಕುಕ್ಕರುಗಾಲಲ್ಲಿ ಕೂತಿದ್ದಾನೆ. ಎಷ್ಟೇ ಪ್ರಯತ್ನ ಮಾಡಿದರೂ ಮೇಲೇಳಲು ಸಾಧ್ಯವಾಗುತ್ತಿಲ್ಲ. ಕಾಲು ಗಂಟು ಸಹಕರಿಸುತ್ತಿಲ್ಲ. ಅಲ್ಲಿದ್ದ ಜಾಗವಾದರೂ ಎಷ್ಟು? ಸಾಲಿಗೆ ಕಟ್ಟಿಟ್ಟಿದ್ದ ಶೌಚಗೃಹಗಳು. ಅಂಗೈ ಊರಿ ಏಳಲೂ ಸಾಧ್ಯವಾಗದಷ್ಟು ಕಿರಿದು. ಹಿಡಿದುಕೊಂಡು ಮೇಲೇಳುವುದಕ್ಕೆ ವಯಸ್ಸಾದವರಿಗೆ ಒಂದು ಆಧಾರ ಬೇಕಲ್ಲ? ಅದೇ ಇಲ್ಲ. ಒಳಗೆ ಹೋದವರು ಅವನ ಕಂಕುಳಿಗೆ ಕೈಹಾಕಿ ಮೇಲೆತ್ತಲು ಪ್ರಯತ್ನಿಸಿದರೆ ಒಬ್ಬರಿಂದ ಬಲ ಪ್ರಯೋಗಿಸಿ ಎತ್ತಲು ಸಾಧ್ಯವಾಗದೆ, ಸಹಾಯಕ್ಕೆ ಮತ್ತಿಬ್ಬರನ್ನು ಕರೆದು, ಯಾರಂತೆ? ಏನಂತೆ? ಯಾಕಂತೆ? ಕ್ಷಣಾರ್ಧದಲ್ಲಿ ಸುದ್ದಿ ಹರಡಿಬಿಟ್ಟಿತ್ತು. ಶೌಚಾಲಯದ ಎದುರು

## ಕಳೆದ ಸಂಚಿಕೆಯಲ್ಲಿ



ಸೊಸೆಯ ಆಸೆಯಂತೆ ಚಿದಾನಂದ ಮನೆಯ ಮೇಲೆ ಮನೆಗಳನ್ನು ಕಟ್ಟಿಸಿಕೊಟ್ಟ. ಬಾಡಿಗೆ ದುಡ್ಡು ಕೈಸೇರುವಂತಾಯಿತು. ಅಪ್ಪ ಹಾಗೂ ಹೆಂಡತಿಯ ನಡುವಣ ಪ್ರೀತಿ–ಹೊಂದಾಣಿಕೆ ನೋಡಿ ಭಾರ್ಗವನೂ ಖುಷಿ ಪಟ್ಟ. ಎಲ್ಲವೂ ಸರಿಯಾಗಿ ಸಾಗುತ್ತಿದೆ ಎನ್ನುವಾಗ್ಗೆ ಚಿದಾನಂದ ಮರೆತಿದ್ದ ಭಾಮಗಳನ್ನು ಶೀಲಾ ನೆನಪಿಸಿದಳು. ಅತ್ತಿಗೆ ಒಂದು ವೇಳೆ ಬದುಕಿದ್ದು, ಇದ್ದಕ್ಕಿದ್ದಂತೆ ಬಂದು ಆಸ್ತಿ ಕೇಳಿದರೆ ಏನು ಮಾಡುವುದು ಎಂದು ಆತಂಕ ವ್ಯಕ್ತಪಡಿಸಿದಳು. ಸೊಸೆಯ ಆತಂಕವನ್ನು ತಳ್ಳಿಹಾಕಿದರೂ, ಇಡೀ ಆಸ್ತಿಯನ್ನೆಲ್ಲ ಮಗನಿಗೆ ದಾನಪತ್ರ ಮಾಡಿಕೊಡುವ ಮೂಲಕ ಶೀಲಾಳನ್ನು ಸಮಾಧಾನಪಡಿಸಲು ಚಿದಾನಂದ ಮುಂದಾದ. ಸೊಸೆ–ಮೊಮ್ಮಗನ ಸಖ್ಯದಲ್ಲಿ ಅವನ ಬದುಕು ಸುಗಮವಾಗಿ ಸಾಗತೊಡಗಿತು. ಆದರೆ, ವಯೋಸಹಜವಾದ ಮರೆವಿನ ಕಾಯಿಲೆ ಕಾಡತೊಡಗಿತು. ಮಾವನ ಮಾತಿನ ಚಪಲ ಸೊಸೆಗೆ ನುಂಗಲಾರದ ತುತ್ತಾಯಿತು. ಬಂದವರೆದುದು ಮಾವ ತನ್ನ ಮಾನ ಕಳೆಯುತ್ತಿದ್ದಾರೆ ಎಂದು ಶೀಲಾಳಿಗೆ ಕಿರಿಕಿರಿಯಾಗತೊಡಗಿತು. ಮಾವ–ಸೊಸೆಯ ನಡುವಿನ ನಂಟು ದಿನದಿಂದ ದಿನಕ್ಕೆ ಗಡುಸಾಗತೊಡಗಿತು.

ಒಂದಷ್ಟು ಜನ ಜಮಾಯಿಸಿದ್ದರು. ಇಷ್ಟು ವಯಸ್ಸಾದೋರನ್ನ ಹೊರಗೆ ಕರೆದುಕೊಂಡು ಬರೋದೇ ತಪ್ಪು ಎನ್ನುವ ಮಾತು ಕಿವಿಗೆ ಬಿದ್ದು ಶೀಲಾ ಅವಮಾನದಿಂದ ಕುಸಿದು ಹೋಗಿದ್ದಳು. ಇನ್ನ್ಯಾವತ್ತೂ ಈ ಮಾವನನ್ನು ಎಲ್ಲಿಗೂ ಕರೆದುಕೊಂಡು ಹೋಗಬಾರದು ಎಂದು ಶಪಥ ಮಾಡಿದ್ದಳು. ಅಂದರೆ ತನಗೂ ಗೃಹಬಂಧನ. ತಾನೇನಿದ್ದರೂ ಈ ಮಾವನ ನಿಗಾ ನೋಡಿಕೊಂಡು ಮನೆಯಲ್ಲಿ ಬಿದ್ದಿರಬೇಕು.

'ಅವರಿಗೋಸ್ಕರ ನಿನ್ನ ಸಂತೋಷಾನ ಯಾಕೆ ಕಳ್ಕೋತಿ? ನೋಡ್ಕಳ್ಳೋಕೆ ಒಂದು ಜನ ಇಟ್ಕೊಳ್ಳಿ' ಸಲಹೆ ಬಂದಿತ್ತು. ಹೇಳುವವರಿಗೇನು ಸುಲಭ. ಮನೆ ಕೆಲಸಕ್ಕೇ ಜನ ಬೇಡ ಅಂದವಳು ಶೀಲಾ. ಈಗ ತಿಂಗಳು ತಿಂಗಳೂ ಸಾವಿರಾರು ರೂಪಾಯಿ ಸುರಿದು ಮುದುಕನನ್ನು ನೋಡಿಕೊಳ್ಳಲು ಜನ ಗೊತ್ತು ಮಾಡಬೇಕೇ? ಒಂದು ಮನೆಯ ಬಾಡಿಗೆ ಅದಕ್ಕೇ ಮೀಸಲಿಡಬೇಕಾದೀತು. ಅಲ್ಲದೆ ಮನೆಯಲ್ಲಿರುವಾಗ ಎಂಥ ಪರಿಸ್ಥಿತಿಯನ್ನಾದರೂ ತಾನು ನಿಭಾಯಿಸಬಲ್ಲೆ ಎನ್ನುವ ವಿಶ್ವಾಸ ಅವಳಿಗಿದೆ. ಸದ್ಯಕ್ಕಂತೂ ಅಷ್ಟರಮಟ್ಟಿಗೆ ಚಿದಾನಂದನಿಗೆ ಮೈಮೇಲೆ ಪ್ರಜ್ಞೆ ಇದೆ. ತಿಳಿವಳಿಕೆ ಇದೆ. ಎಲ್ಲರೆದುರಿಗೆ ಕೇಳಲಾಗದೆ ಗಂಟಲು ಒತ್ತುತ್ತಿದ್ದ ಪ್ರಶ್ನೆಯನ್ನು ಮನೆಗೆ ಬರುತ್ತಿದ್ದಂತೆ ಕಾರಿಕೊಂಡಿದ್ದಳು ಶೀಲಾ.

'ಅಲ್ಲಾ ಮಾವ, ನಿಮಗೆ ತಲೆ ಸರಿ ಉಂಟಾ, ಇಲ್ವಾ? ಉಚ್ಚೆ ಹುಯ್ಕೊಂಡು ಬರೋಕೆ ಹೋದೋರು ಕೂರೋಕೆ ಯಾಕೆ ಹೋದ್ರಿ? ನಿಂತ್ಕೊಂಡು ಮಾಡಿದ್ರೆ ಉಚ್ಚೆ ಬರ್ತಿರ್ಲಿಲ್ವಾ?'

'ಏನಾಯ್ತು? ಯಾವಾಗ? ಯಾಕೆ ಬೈತಿದ್ದಿ?' ಕೇಳಿದ್ದ ಚಿದಾನಂದ.

'ಊಟ ಮಾಡಿ ಕೈ ತೊಳ್ಕೊಂಡು ಬರೋವಷ್ಟ್ರಲ್ಲಿ ಎಲ್ಲಾ ಮರೆತೇ ಹೋಯ್ತಾ? ಕರ್ಮ, ಕರ್ಮ. ಕಕ್ಕಸಲ್ಲಿ ಕೂತ್ಕೊಂಡು ಏಳೋಕಾಗ್ದೆ ಜನ ಸೇರಿಸಿದ್ದು ಮರೆತೇ ಹೋಯ್ತಾ?'

ನಿಧಾನಕ್ಕೆ ನೆನಪು ಮಾಡಿಕೊಂಡಿದ್ದ ಚಿದಾನಂದ.

'ಓ ಅದಾ, ಕಕ್ಕಸು ಬರೋ ಹಾಗಾಯ್ತು. ಅದಕ್ಕೇ...'

'ಅದೆಲ್ಲಾ ಮನೇಲಿ ಮುಗಿಸ್ಕೊಂಡು ಹೋಗೋದಲ್ವಾ?'

'ಹೇಳಿ ಕೇಳಿ ಬರುತ್ತೇನೇ? ತನ್ನಷ್ಟಕ್ಕೆ ಬಂದ್ಬಿಡುತ್ತೆ'.

'ನಾನು ಏನು ಹೇಳಿದ್ರೂ ಅದಕ್ಕೊಂದು ಪ್ರತಿ ವಾದ ಇದ್ದೇ ಇರುತ್ತೆ. ಅದೆಲ್ಲಾ ಗೊತ್ತಾಗುತ್ತೆ ನಿಮಗೆ. ಹೊರಗಡೆ ಹೋದಾಗ ಮರ್ಯಾದೆಯಿಂದ ನಡ್ಕೋಬೇಕು ಅನ್ನೋದು ಗೊತ್ತಾಗಲ್ವಾ?'

'ಮರ್ಯಾದೆ ಹೋಗುವಂಥದ್ದು ಏನಾಯ್ತು? ನಂಗಂತೂ ಗೊತ್ತಾಗಲ್ಲ...'

'ನಿಮ್ಮ ಜೊತೆ ಮಾತಾಡೋರಿಗೆ ಬುದ್ಧಿ ಇಲ್ಲ...' ಬುಸುಗುಟ್ಟಿದ್ದಳು ಶೀಲಾ.

'ಹೌದಾ, ನಿಂಗೆ ಬುದ್ಧಿ ಇತ್ತಾ?' ಕೆಣಕಿದ್ದ ಚಿದಾನಂದ. ಈ ಮಾವನಿಗೆ ಏನು ಹೇಳಬೇಕು ಗೊತ್ತಾಗದೆ ಅವಡುಗಚ್ಚಿದ್ದಳು ಶೀಲಾ. ಮರೆವು ಜಾಸ್ತಿಯಾಗಬಾರದು ಎಂದು ಏನೇನೆಲ್ಲಾ ಪುಕ್ಕಟೆ ಸಲಹೆ ಕೊಟ್ಟಿದ್ದರು ಜನ. ಒಂದು ಕಾಲದಲ್ಲಿ ಪದರಂಗ ಬಿಡಿಸುವುದು ಅಂದರೆ ಭಾರೀ ಹುರುಪು ಚಿದಾನಂದನಿಗೆ. ಗಂಟೆಗಟ್ಟಲೆ ಬೇಕಾದರೂ ಇದರಲ್ಲಿ ಕಾಲ ಕಳೆಯುತ್ತಿದ್ದ. ಎಷ್ಟು ತಿಣುಕಿದರೂ ಗೊತ್ತಾಗದ ಪದ ಆದರೆ ಶೀಲಾ ಹತ್ತಿರ ಸಮಾಲೋಚನೆ ನಡೆಸುತ್ತಿದ್ದ. ಮಾವನ ಜೊತೆ ಸೇರಿ ಅವಳಿಗೂ ಪದರಂಗದ ಗೀಳು ಅಂಟಿಕೊಂಡಿತ್ತು. ಯಾವಾಗ ಮರೆವು ಮುಂದೂಡಲು ಅದೂ ಒಂದು ಸಾಧನ ಎಂದು ಬಲ್ಲವರಿಂದ ತಿಳಿಯಿತೋ, 'ಪದರಂಗ ಮಾಡಿ ಮಾವ, ಪದರಂಗ ಮಾಡಿ ಮಾವ' ಎನ್ನುತ್ತಾ ಚಿದಾನಂದನ ಬೆನ್ನು ಹತ್ತಿದ್ದಳು ಶೀಲಾ.

'ಎಲ್ಲಿದ್ಯೇ ಪದರಂಗ?'